# BMS
## INSTITUTE OF TECHNOLOGY AND MANAGEMENT

Avalahalli, Doddaballapur Main Road, Bengaluru – 560064


# Tiles from Plastic by BMSIT&M Students

## Vijaya Karnataka



ನಮ್ಮನ್ನು ಫಾಲೋ ಮಾಡಿ
@campus_vk
www.facebook.com/groups/vk.campus.connect/

VK ಕ್ಯಾಂಪಸ್ CONNECT

# ಪ್ಲಾಸ್ಟಿಕ್‌ನಿಂದ ಟೈಲ್ಸ್ ಮಾಡಿದ ಬಿಎಂಎಸ್‌ಐಟಿ ಸ್ಟೂಡೆಂಟ್ಸ್

Varsha/ BMSIT College

ಬಿಎಂಎಸ್‌ಐಟಿ ಕಾಲೇಜಿನ ಮೂರನೇ ವರ್ಷದ ಸಿವಿಲ್ ಎಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿಗಳು ಪ್ಲಾಸ್ಟಿಕ್ ಬಳಸಿ ಟೈಲ್ಸ್ ನಿರ್ಮಾಣ ಮಾಡಿದ್ದಾರೆ.

ವಿಕಾಸ್, ಪ್ರವೀಣ್‌ಕುಮಾರ್ ಮತ್ತು ದರ್ಶನ್ ಎಂಬ ವಿದ್ಯಾರ್ಥಿಗಳು ಸಹಾಯಕ ಉಪನ್ಯಾಸಕರಾದ ಬಿ ಆರ್ ವಿನೋದ್ ಎಂಬುವವರ ಮಾರ್ಗದರ್ಶನದಲ್ಲಿ ಈ ಟೈಲ್ಸ್ ಮಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪರಿಸರ ಪ್ಲಾಸ್ಟಿಕ್‌ನಿಂದ ಸಿಕ್ಕಾಪಟ್ಟೆ ಮಲಿನವಾಗುತ್ತಿದೆ. ಆ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕು ಎಂದು ತೀರ್ಮಾನಿಸಿ ಈ ಮೂವರು ವಿದ್ಯಾರ್ಥಿಗಳು ಈ ಪ್ರಾಜೆಕ್ಟ್ ಮಾಡಿದ್ದಾರೆ.

'ಪ್ಲಾಸ್ಟಿಕನ್ನು ರಿಸೈಕಲ್ ಮಾಡಿದರೆ ಅದು ಪರಿಸರಕ್ಕೆ ಮಾರಕವಾಗುವುದಿಲ್ಲ, ಜತೆಗೆ ಒಮ್ಮೆಲೇ ಪ್ಲಾಸ್ಟಿಕ್ ಬ್ಯಾನ್ ಮಾಡಿದರೆ ಕೊಂಚ ಕಷ್ಟವೂ ಆಗುತ್ತದೆ. ಹಾಗಾಗಿ ಇದನ್ನು ಹಂತ ಹಂತವಾಗಿ ಬ್ಯಾನ್ ಮಾಡಬೇಕು ಜತೆಗೆ ರಿಸೈಕಲ್ ಮಾಡಿದರೆ ಇನ್ನೂ ಒಳ್ಳೆಯದು ಎಂಬುದನ್ನು ತಿಳಿದುಕೊಂಡು ನಾವು ಈ ಟೈಲ್ಸ್ ಮಾಡಿದ್ದೇವೆ' ಎನ್ನುತ್ತಾರೆ ಈ ಮೂವರು.

ಕ್ಯಾಂಪಸ್ talents

**ಕೈಗೆಟುಕುವ ದರ**

ಇದು ಪರಿಸರ ಸ್ನೇಹಿಯು ಜತೆಗೆ ಎಲ್ಲರ ಕೈಗೆಟುಕುವ ದರದಲ್ಲಿಯೂ ಸಿಗುತ್ತದೆ. ಸುಲಭವಾಗಿ ಇದು ಒಡೆದು ಹೋಗುವುದಿಲ್ಲ, ಹೆಚ್ಚು ಬಾಳಿಕೆ ಬರುತ್ತದೆ. ಎಲ್ಲದರ ಜತೆಗೆ ಪರಿಸರಕ್ಕೆ ಹಾನಿಯಾಗುವಂತಹ ಪ್ಲಾಸ್ಟಿಕನ್ನು ಈ ಮೂಲಕ ರಿಸೈಕಲ್ ಮಾಡಿ ಕಸದಿಂದ ರಸವನ್ನು ತೆಗೆಯಬಹುದು.

'ಈ ಮೂವರು ವಿದ್ಯಾರ್ಥಿಗಳು ಇನ್ನೋವೇಟಿವ್ ಐಡಿಯಾದೊಂದಿಗೆ ನನ್ನ ಬಳಿ ಬಂದರು. ಇದು ಮುಂದಿನ ದಿನಗಳಲ್ಲಿ ಮಾರುಕಟ್ಟೆಯನ್ನು ಪ್ರವೇಶ ಮಾಡುವಂತಹ ವಸ್ತುವಾಗುತ್ತದೆ. ಈ ವಿದ್ಯಾರ್ಥಿಗಳು ಸಾಧನೆ ಕಾಲೇಜಿಗೆ ಒಂದು ರೀತಿಯಲ್ಲಿ ಹೆಮ್ಮೆಯ ಸಂಗತಿ' ಎನ್ನುವುದು ಉಪನ್ಯಾಸಕರಾದ ವಿನೋದ್ ಮಾತಾಗಿದೆ.

**ಪ್ಲಾಸ್ಟಿಕನ್ನು ಅಲ್ಲಿ ಇಲ್ಲಿ ಬಿಸಾಡುವುದಕ್ಕಿಂತ ಈ ಟೈಲ್ಸ್ ಮಾಡಿದರೆ ಒಳ್ಳೆಯದು. ತ್ಯಾಜ್ಯ ನಿರ್ವಹಣೆ ಸರಿ ಇಲ್ಲ ಎನ್ನುವುದಕ್ಕಿಂತ ಈ ರೀತಿಯ ಮಾರ್ಗ ಹುಡುಕಿಕೊಳ್ಳಬಹುದು.**
ವಿಕಾಸ್, ಪ್ರವೀಣ್‌ಕುಮಾರ್, ದರ್ಶನ್ | ವಿದ್ಯಾರ್ಥಿಗಳು

ಒಟ್ಟಿನಲ್ಲಿ ವಿದ್ಯಾರ್ಥಿಗಳ ಈ ಪ್ರಾಜೆಕ್ಟ್ ಇಡೀ ಕಾಲೇಜಿನಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ. ಇಂತಹ ಉಪಯೋಗಿ ವಸ್ತುಗಳನ್ನು ಮಾಡಿದ ಈ ಮೂವರಿಗೂ ಕಾಲೇಜು ಸಿಬ್ಬಂದಿ ಮತ್ತು ಸ್ನೇಹಿತರು ಅಭಿನಂದನೆ ಸಲ್ಲಿಸಿದ್ದಾರೆ.

**ಪ್ಲಾಸ್ಟಿಕ್ ಟೈಲ್ಸ್ ಮಾಡುವ ವಿಧಾನ**

ಮೊದಲು ಪ್ಲಾಸ್ಟಿಕ್ ಕವರ್, ಮುರಿದ ಪ್ಲಾಸ್ಟಿಕ್‌ಗಳನ್ನು ಸಂಗ್ರಹಿಸಿ ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಬೇಕು. ಸ್ಕ್ರ್ಯಾಪ್ ಮಾಡಿದ ಪ್ಲಾಸ್ಟಿಕ್ ಅನ್ನು ಅರೆ ದ್ರವ ಸ್ಥಿತಿಗೆ ಕರಗಿಸಬೇಕು. ನಂತರ ಕರಗಿದ ಪ್ಲಾಸ್ಟಿಕನ್ನು ಅಚ್ಚಿನಲ್ಲಿ ಸಂಸ್ಕರಿಸಿ ಸರಿಯಾದ ಆಕಾರವನ್ನು ನೀಡಬೇಕು. ನಂತರ ಕಾರ್ನ್ F ಹಿಟ್ಟು, ಅಡಿಗೆ ಸೋಡಾ, ಅಂಟು ಈ ಮೂರನ್ನು ಸರಿಯಾದ ಪ್ರಮಾಣದಲ್ಲಿ ಬೆರೆಸಿ ಅದನ್ನು ನಾವು ಅಚ್ಚಿನಲ್ಲಿ ಹಾಕಿದ ಟೈಲ್ಸ್‌ಗಳ ಮೇಲೆ ಕೋಟ್ ಮಾಡಬೇಕು. ಇದು ಬೆಂಕಿಯಿಂದ ಟೈಲ್ಸ್ ಅನ್ನು ಸಂರಕ್ಷಿಸುತ್ತದೆ. ಈ ಟೈಲ್ಸ್‌ಗಳನ್ನು ರಸ್ತೆ, ಮನೆ, ಪಾರ್ಕಿಂಗ್ ಜಾಗಗಳಲ್ಲಿ ಬಳಸಬಹುದು.